ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರದನ್ಯಾದಂ.ರವರ ನ್ಯಾಯಾಲಯ, ತರೀಕೆರೆ.

ಸಿ.ಸಿ.ನಂ.1733/2022

ದಿನಾಂಕಃ25.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂಃ4 ಸಿ.ಡಬ್ಲ್ಯೂಃ 12

ಸಾಕ್ಷಿಯ ಹೆಸರು : ಯೋಗಿಂದ್ರನಾಥ್
ತಂದೆಯ ಹೆಸರು : ಕರಿಬಸಪ್ಪ
ವಯಸ್ಸು : 60 ವರ್ಷ
ಉದ್ಯೋಗ : ವ್ಯವಸಾಯ
ವಾಸ : ಸಂಕ್ಲಪುರ.

**ಮುಖ್ಯ ವಿಚಾರಣೆಃ** ಮಾನ್ಯ ಸ ಸ ಅ ಅವರಿಂದಃ-

ಮೃತ ರಾಜು ನನಗೆ ಗೊತ್ತಿಲ್ಲ. ಚಾಸಾ 11 ರವರು ನನಗೆ ಗೊತ್ತಿಲ್ಲ.

ನಾನು ಯಾವುದೇ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ನಾನು ಯಾವುದೇ ಹೇಳಿಕೆಯನ್ನು ಪೊಲೀಸರಿಗೆ ನೀಡಿಲ್ಲ. ಆರೋಪಿಯನ್ನು ನಾನು ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಸ ಸ ಅ ರವರಿಂದ :-

ದಿಃ 23.09.2021 ರಂದು ಮಃ 02.30 ರ ಸಮಯದಲ್ಲಿ ರಾಜ್ಯ ಹೆದ್ದಾರಿ ಸಂಖ್ಯೆ 24 ರಲ್ಲಿ ಆರೋಪಿಯು ತನ್ನ ಬಾಬ್ತು ಕಾರು ಸಂಖ್ಯೆ ಕೆ ಎ 66 ಎನ್ 2388 ನ್ನು ಮದ್ಯ ಸೇವನೆ ಮಾಡಿ ಅಜ್ಜಂಪುರ ಕಡೆಯಿಂದ ಹೊಸದುರ್ಗದ ಕಡೆಗೆ ಅತಿ ವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿ ರಸ್ತೆಯ ಬಲ ಬದಿಗೆ ಹೋಗಿದ್ದು ಎದುರುಗಡೆಯಿಂದ ಮೃತ ರಾಜಪ್ಪನವರು ಬರುತ್ತಿದ್ದ ಮೋಟಾರ್ ಸೈಕಲ್ ಸಂಖ್ಯೆ ಕೆ ಎ 18 ಎಕ್ಸ್ 2626 ಕ್ಕೆ ಡಿಕ್ಕಿ ಹೊಡಿಸಿದ ಪರಿಣಾಮ ಸದರಿ ರಾಜಪ್ಪ ಹಾಗೂ ಅದರಲ್ಲಿನ ಹಿಂಬದಿ ಸವಾರ ಚಾಸಾ 11 ರವರಿಗೆ ತೀವ್ರ ಸ್ವರೂಪದ

ಗಾಯಗಳಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ರಾಜಪ್ಪನವರು ಅದೇ ದಿನ ಸಂಜೆ 04.15 ರ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಸದರಿ ಗಾಯಗಳಿಂದ ಮೃತಪಟ್ಟಿರುತ್ತಾರೆಂದರೆ ಸರಿಯಲ್ಲ. ಆರೋಪಿಯು ಆ ದಿನ ಸದರಿ ಕಾರನ್ನು ಚಲಾಯಿಸಲು ಯಾವುದೇ ಪರವಾನಿಗೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿ.24.09.2021 ರಂದು ಸದರಿ ಘಟನೆಯ ಕುರಿತು ನಾನು ನನ್ನ ಹೇಳಿಕೆಯನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ತನ್ನ ಹೇಳಿಕೆಯನ್ನು ಈಗ ಓದಿ ಹೇಳಿದ್ದು, ಸಾಕ್ಷಿಯು ತನ್ನ ಹೇಳಿಕೆಯನ್ನು ತಿರಸ್ಕರಿಸಿದ ಮೇರೆಗೆ ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

ಆರೋಪಿಯೊಂದಿಗೆ ರಾಜೀಯಾಗಿ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದಃ- ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಃ** ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಂತೋಷ್ ಕುಮಾರ್ ಪಿ.ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಹೆ.ಪ್ರ.ದ.ನ್ಯಾ.ದಂಡಾಧಿಕಾರಿ, ತರೀಕೆರೆ.

ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರದನ್ಯಾದಂ.ರವರ ನ್ಯಾಯಾಲಯ, ತರೀಕೆರೆ.

<u>ಸಿ.ಸಿ.ನಂ.1733/2022</u>

ದಿನಾಂಕಃ25.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂಃ3 ಸಿ.ಡಬ್ಲ್ಯೂಃ 11

ಸಾಕ್ಷಿಯ ಹೆಸರು ಃ ಕುಮಾರ
ತಂದೆಯ ಹೆಸರು ಃ ಹನುಮಂತಪ್ಪ
ವಯಸ್ಸು ಃ 34 ವರ್ಷ
ಉದ್ಯೋಗ ಃ ಕೂಲಿ
ವಾಸ ಃ ಜಾನಕಲ್ಲು.

**<u>ಮುಖ್ಯ ವಿಚಾರಣೆಃ</u>** ಮಾನ್ಯ ಸ ಸ ಅ ಅವರಿಂದಃ-

ಮೃತ ರಾಜಪ್ಪ ನನಗೆ ಚಿಕ್ಕಪ್ಪ. ಚಾಸಾ 1 ನನ್ನ ಸಂಬಂಧಿಕರು. ಚಾಸಾ 10 ನನ್ನ ಅಣ್ಣ. ಚಾಸಾ 13 ನನ್ನ ಸಂಬಂಧಿಕರು.

ನಾನು ಮತ್ತು ಮೃತ ರಾಜು ರವರು ಕಾಟೀನಗೆರೆ ಗೇಟ್ ನಿಂದ ಅಜ್ಜಂಪುರಕ್ಕೆ ಬೈಕ್ ನಲ್ಲಿ ಬರುವಾಗ ಸದರಿ ಮೋಟಾರ್ ಸೈಕಲ್ ಅನ್ನು ಸದರಿ ರಾಜು ರವರು ಚಲಾಯಿಸುತ್ತಿದ್ದು ನಾನು ಹಿಂಬದಿ ಸವಾರನಾಗಿ ಹೋಗುತ್ತಿದ್ದೆ. ನಾವು ರಸ್ತೆಯ ಎಡ ಬದಿಯಲ್ಲಿ ಹೋಗುತ್ತಿರುವಾಗ ಅಜ್ಜಂಪುರದಿಂದ ಒಂದು ಕಾರು ಬರುತ್ತಿದ್ದು ಸದರಿ ಕಾರು ಅಡ್ಡದಿಡ್ಡಿಯಾಗಿ ಬಂದು ನಮ್ಮ ಮೋಟಾರ್ ಸೈಕಲ್ ಗೆ ಡಿಕ್ಕಿಪಡಿಸಿದ್ದು ಆಗ ಸಮಯ 02.30 ಆಗಿತ್ತು. ಸದರಿ ಅಪಘಾತ ಈಗ ಒಂದು ವರ್ಷದ ಹಿಂದೆ ಆಗಿರುತ್ತದೆ. ಕಾರಿನ ಚಾಲಕ ಇಳಿದು ಹೋಗಿದ್ದು ನಾನು ಜ್ಞಾನ ತಪ್ಪಿ ಬಿದ್ದಿದ್ದೆ ನಾನು ಆರೋಪಿಯನ್ನು ನೋಡಿಲ್ಲ.

ಸಾಕ್ಷಿಗೆ 4 ಪೋಟೋಗಳನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿನ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ನಿಪಿ6 ರಿಂದ 9 ಎಂದು ಗುರುತಿಸಲಾಯಿತು.

ನನಗೆ ಬಲ ಕಾಲು ತುಂಡುತುಂಡಾಗಿ ಬೆರಳುಗಳು ತುಂಡಾಗಿರುತ್ತದೆ. ಸದರಿ ರಾಜಪ್ಪ ತೀರಿ ಹೋಗಿರುತ್ತಾರೆ. ನಾನು ಅಜ್ಜಂಪುರಕ್ಕೆ ಹೋಗಿ ಅಲ್ಲಿ ಚಿಕಿತ್ಸೆ ಪಡೆದು ನಂತರ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಮತ್ತು ಸುಬ್ಬಯ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ

ಪಡೆದಿರುತ್ತೇನೆ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)*

**<u>ಪಾಟೀ ಸವಾಲುಃ</u>** ಮಾನ್ಯ ಸ ಸ ಅ ರವರಿಂದ ಃ-

ಸದರಿ ಅಪಘಾತವನ್ನು ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯು ಮಾಡಿರುತ್ತಾರೆಂದರೆ ಸರಿಯಲ್ಲ.

ಸಾಕ್ಷಿಯು ತಿರಸ್ಕರಿಸಿದ ಸದರಿ ಹೇಳಿಕೆಯ ಭಾಗವನ್ನು ನಿಪಿ10 ಎಂದು ಗುರುತಿಸಲಾಯಿತು.

ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀಸವಾಲುಃ</u>** ಆರೋಪಿ ಪರ ವಕೀಲರಿಂದಃ-

ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**<u>ಮರು ವಿಚಾರಣೆ</u>** ಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಂತೋಷ್ ಕುಮಾರ್ ಪಿ.ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಹೆ.ಪ್ರ.ದ.ನ್ಯಾ.ದಂಡಾಧಿಕಾರಿ, ತರೀಕೆರೆ.

ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರದನ್ಯಾದಂ.ರವರ ನ್ಯಾಯಾಲಯ, ತರೀಕೆರೆ.

ಸಿ.ಸಿ.ನಂ.1733/2022

ದಿನಾಂಕಃ25.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂಃ2 ಸಿ.ಡಬ್ಲ್ಯೂಃ 10

| | |
|---|---|
| ಸಾಕ್ಷಿಯ ಹೆಸರು | ಃ ಮಂಜಪ್ಪ |
| ತಂದೆಯ ಹೆಸರು | ಃ ಹನುಮಂತಪ್ಪ |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ಕೂಲಿ |
| ವಾಸ | ಃ ಜಾನಕಲ್ಲು. |

**ಮುಖ್ಯ ವಿಚಾರಣೆಃ** ಮಾನ್ಯ ಸ ಸ ಅ ಅವರಿಂದಃ-

ಮೃತ ರಾಜು ನನಗೆ ಗೊತ್ತಿಲ್ಲ. ಚಾಸಾ 11 ನನ್ನ ತಮ್ಮ.

ನಾನು ಯಾವುದೇ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ನಾನು ಯಾವುದೇ ಹೇಳಿಕೆಯನ್ನು ಪೊಲೀಸರಿಗೆ ನೀಡಿಲ್ಲ. ಆರೋಪಿಯನ್ನು ನಾನು ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಸ ಸ ಅ ರವರಿಂದ ಃ-

ದಿಃ 23.09.2021 ರಂದು ಮಃ 02.30 ರ ಸಮಯದಲ್ಲಿ ರಾಜ್ಯ ಹೆದ್ದಾರಿ ಸಂಖ್ಯೆ 24 ರಲ್ಲಿ ಆರೋಪಿಯು ತನ್ನ ಬಾಬ್ತು ಕಾರು ಸಂಖ್ಯೆ ಕೆ ಎ 66 ಎನ್ 2388 ನ್ನು ಮದ್ಯ ಸೇವನೆ ಮಾಡಿ ಅಜ್ಜಂಪುರ ಕಡೆಯಿಂದ ಹೊಸದುರ್ಗದ ಕಡೆಗೆ ಅತಿ ವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿ ರಸ್ತೆಯ ಬಲ ಬದಿಗೆ ಹೋಗಿದ್ದು ಎದುರುಗಡೆಯಿಂದ ಮೃತ ರಾಜಪ್ಪನವರು ಬರುತ್ತಿದ್ದ ಮೋಟಾರ್ ಸೈಕಲ್ ಸಂಖ್ಯೆ ಕೆ ಎ 18 ಎಕ್ಸ್ 2626 ಕ್ಕೆ ಡಿಕ್ಕಿ ಹೊಡಿಸಿದ ಪರಿಣಾಮ ಸದರಿ ರಾಜಪ್ಪ ಹಾಗೂ ಅದರಲ್ಲಿನ ಹಿಂಬದಿ ಸವಾರ ಚಾಸಾ 11 ರವರಿಗೆ ತೀವ್ರ ಸ್ವರೂಪದ

ಗಾಯಗಳಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ರಾಜಪ್ಪನವರು ಅದೇ ದಿನ ಸಂಜೆ 04.15 ರ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಸದರಿ ಗಾಯಗಳಿಂದ ಮೃತಪಟ್ಟಿರುತ್ತಾರೆಂದರೆ ಸರಿಯಲ್ಲ. ಆರೋಪಿಯು ಆ ದಿನ ಸದರಿ ಕಾರನ್ನು ಚಲಾಯಿಸಲು ಯಾವುದೇ ಪರವಾನಿಗೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿ.24.09.2021 ರಂದು ಸದರಿ ಘಟನೆಯ ಕುರಿತು ನಾನು ನನ್ನ ಹೇಳಿಕೆಯನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ತನ್ನ ಹೇಳಿಕೆಯನ್ನು ಈಗ ಓದಿ ಹೇಳಿದ್ದು, ಸಾಕ್ಷಿಯು ತನ್ನ ಹೇಳಿಕೆಯನ್ನು ತಿರಸ್ಕರಿಸಿದ ಮೇರೆಗೆ ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

ಆರೋಪಿಯೊಂದಿಗೆ ರಾಜೀಯಾಗಿ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದಃ- ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ** ಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಂತೋಷ್ ಕುಮಾರ್ ಪಿ.ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಹೆ.ಪ್ರ.ದ.ನ್ಯಾ.ದಂಡಾಧಿಕಾರಿ, ತರೀಕೆರೆ.